ಮಸ್ಕಿರಿ ಮಾಡಿದ್ದು ಅಷ್ಟೇ. ನಾನಿನ್ನು ಬರ್‍ತಿನಿ...' ಎಂದು ಪೂವ ಮರಕಾಲನೂ ನಗುತ್ತಾ... ಕೂತಲ್ಲಿಂದ ಎದ್ದು ಹೊರಟವನು 'ಓಡ ಬೇಕಾದಾಗ ಹೇಳಿ ಕಳ್ಸಿ ಪಟ್ಲೆರೆ... ದಾಕ್ಷಿಣ್ಯ ಬೇಡ' ಎಂದು ಮತ್ತೆ ಪಟೇಲರಿಗೆ ನೆನಪಿಸುತ್ತ, ರಾಜಬೀದಿಯತ್ತ ನಡೆದಿದ್ದ. ಆತ ಅತ್ತ ಮುಖ ಹಾಕಿದೊಡನೆ, ದೇವಪ್ಪ ಶೆಟ್ರು ಕೊಡಿಮರದ ಬಗ್ಗೆ ಅಂತರಂಗದೊಳಗಿರುವ ತನ್ನ ತುಮುಲಗಳನ್ನೆಲ್ಲ ಶ್ರೀಧರಾಚಾರಿಯೆದುರು ಬರಿದು ಮಾಡಿಕೊಳ್ಳಲು ಆತನನ್ನು ಕರೆದುಕೊಂಡು ವಾಸುತಂತ್ರಿಗಳ ಮನೆಕಡೆ ದಾಪುಕಾಲು ಹಾಕಿದ್ದರು.

ಸಾಗುವ ದಾರಿಯಲ್ಲಿ ಶೆಟ್ರು, ಶ್ರೀಧರಾಚಾರಿಗೆ ಹಾಗೆಯೇ ಒಂದು ಮಾತನ್ನು ಕೇಳಿದ್ದರು... "ಅಲ್ಲ ಮಾರಾಯ... ನಮ್ಮ ನಾರ್ಣಮಯ್ಯರಲ್ಲಿ ಮೊನ್ನೆ ನಾನು ...ಎಲ್ಲೂ ಬಿಳಿಕೇಪಳ ಮರವೇ ಸಿಕ್ತಾ ಇಲ್ಲ; ಬೇರೆ ಮರದಲ್ಲಿ 'ಕೊಡಿಮರ' ಮಾಡ್ಬಹುದಾ ಅಂತ ಕೇಳಿದ್ರೆ 'ಮೂಡ್ಲಾಗಿನ ಕಾಡಲ್ಲಿ ಈಗಲೂ ಆ ಬಿಳಿಕೇಪಳದ ಮರ ಸಿಗ್ಬಹುದು... ಸಿಗುದಿಲ್ಲ ಅಂತಾ ಇಲ್ಲಿ ಅಳುತ್ತ ಕೂತ್ರೆ ಕೆಲಸ ಆಗುತ್ತಾ ಮಾರಾಯ. ನೀನು ಹೋಗಿ ಸ್ವಲ್ಪ ಹುಡುಕ್ಬೇಕು ಅಷ್ಟೇ...' ಅಂತಾ ನಂಗೆ ಗದರಿಸಿಯೇ ಬಿಟ್ರು. ಮಯ್ಯರ ಬಗ್ಗೆ ನಿಂಗೇನನಿಸುತ್ತೋ ಶ್ರೀಧರಾಚಾರಿ?'

'ಮಯ್ಯರು ಹೇಳುದು ನಿಜವೆ; ಬಿಳಿಕೇಪಳ ದೈವಕಾರ್ಯಕ್ಕೆ ಶ್ರೇಷ್ಠಾಂದ್ರೆ ಶ್ರೇಷ್ಠ. ಶ್ರೇಷ್ಠ ಯಾಕಂದ್ರೆ, ಅದು ಗನಾಗಟ್ಟಿ ಮರ; ಎಷ್ಟು ವರ್ಷ ಕಳೆದ್ರೂ... ಆ ಮರದಲ್ಲಿ ಸೀಳು ಬೀಳುದಿಲ್ಲ, ಹುಳ ಬೀಳುದಿಲ್ಲ. ಭೂತದ ದೈವಸ್ಥಾನಕ್ಕೆ ತುಂಬ ಎತ್ತರದ ಕೊಡಿಮರವೂ ಬೇಕಿಲ್ಲ ಪಟ್ಲೆರೆ. ಇದನ್ನೆಲ್ಲ ನೋಡಿಯೆ ನಮ್ಮ ಹಿಂದಿನ ಕಾಲದವರು ದೇವಸ್ಥಾನಕ್ಕಿಂತ ಸಣ್ಣದಿರುವ ದೈವಸ್ಥಾನಕ್ಕೆ, ಸಾಗುವಾನಿ ಮರಕ್ಕಿಂತಲೂ ಬಿಳಿಕೇಪಳವೇ ಶ್ರೇಷ್ಠ ಎಂದು ಇದನ್ನೇ ಖಾಯಸ್ಸು ಮಾಡಿರ್‍ಬಹುದು ಅಷ್ಟೆ. ಈ ಮರದ ಬಗ್ಗೆ ನನ್ನ ಮಾತೇ ಬೇಡ, ನೀವು ವಾಸುತಂತ್ರಿಗಳಲ್ಲೆ ಇನ್ನೊಮ್ಮೆ ಕೇಳಿ ನೋಡಿ ಬೇಕಿದ್ರೆ; ಮತ್ತೂ ಬೇಕಿದ್ರೆ ಕಟೀಲಿನ ದೊಡ್ಡ ಅಸ್ರಣ್ಣನವರನ್ನೂ ಒಂದು ಮಾತು ಕೇಳಿ. ಆ ನಂತರವೇ ಕೊಡಿಮರದ ಕೆಲಸ ಶುರು ಮಾಡುವ ಆಗದ?' ಎಂದು ಶ್ರೀಧರಾಚಾರಿ ಉತ್ತರಿಸಿದ್ದ.

ದೇವಪ್ಪ ಶೆಟ್ರು ಆತನ ಮಾತಿಗೆ ತಲೆ ಆಡಿಸುತ್ತಲೇ ದೊಡ್ಡ ಅಸ್ರಣ್ಣರನ್ನು ಕಾಣಲೇಬೇಕೆಂಬ ಸಂಕಲ್ಪ ಮಾಡಿಕೊಂಡು ವಾಸುತಂತ್ರಿಗಳ ಅಂಗಳಕ್ಕೆ ಬಂದೇ ಬಿಟ್ಟರು. ಇವರು ಬರುವಷ್ಟರಲ್ಲಿ ವಾಸುತಂತ್ರಿಗಳು ಬಲಕೈಗೆ ಒಂದು ಬಟ್ಟೆ ಚೀಲ ಹಾಕಿಕೊಂಡು, ಪಟ್ಟೆಯ ಕತ್ತರಿಕಚ್ಚೆ ಹಾಕಿಕೊಂಡು ಎಲ್ಲಿಗೋ ಕೆಲಸದ ಮೇಲೆ ಹೊರಟು ನಿಂತಿದ್ದರು. ಅಂಗಳ ಹೊಕ್ಕ ಇವರಿಬ್ಬರನ್ನು ನೋಡಿದವರೆ, 'ಬನ್ನಿ ಬನ್ನಿ ಸುಬ್ರಮಣ್ಯದ ಜೋಡಿಗಳು' ಎಂದು ನಗುತ್ತಾ, ಅವರನ್ನು ಕೆಳಚಾವಡಿಗೆ ಕರೆದು ಕೂರಿಸಿಕೊಂಡರು.

ದೇವಪ್ಪ ಶೆಟ್ರು ತಂತ್ರಿಗಳೆದುರು ತಮ್ಮ ಸಮಸ್ಯೆಯನ್ನು ಮತ್ತೆ ಬಿಡಿಸಿಡತೊಡಗಿದ್ದರೆ, ಅವರಿಂದ ಎರಡಡಿ ದೂರ ಕೂತಿದ್ದ ಶ್ರೀಧರಾಚಾರಿಯು ಬಾಯಿಗೆ ಮೌನಮುದ್ರೆಯನ್ನು ಹಾಕಿ ತಂತ್ರಿಗಳ ಮುಖವನ್ನೇ ದಿಟ್ಟಿಸತೊಡಗಿದ್ದ. ಶೆಟ್ಟರ ಮಾತುಗಳನ್ನು ಕೇಳುತ್ತಿದ್ದಂತೆ ತಂತ್ರಿಗಳು 'ಅಲ್ಲ ಮಾರಾಯ, ಬಿಳಿಕೇಪಳ ಮರ ಸಿಗದಿದ್ರೆ, ಏಳು ಕಡಲು ದಾಟಿ ಹೋಗಿ ಅದನ್ನು ತಗಂಬಾ ಅಂದ್ರೆ... ನಿಂಗೆ ತರ್‍ಲಿಕ್ಕೆ ಆಗುತ್ತಾ ಮಾರಾಯ!? ಅದು ಸಿಗದಿದ್ರೆ ತೇಗದ ಮರವೂ ಶ್ರೇಷ್ಠವೆ. ಒಟ್ಟಿನಲ್ಲಿ ದೈವದೇವರ ಎದುರು ಗಟ್ಟಿ ನಿಲ್ಲುವ ಮರವಾಗಬೇಕು ಅಷ್ಟೆ. ಅದಕ್ಕೆ ಹುಳಗಿಳ ಹಿಡಿಯಬಾರದು. ಹೊಡೆಯುವ ಬಿಸಿಲಿಗೆ ಕಾಲಕ್ರಮೇಣ ಸೀಳುಬಿಡಬಾರದು ಅಂತ ಈ ಎಚ್ಚರಿಕೆ ಅಷ್ಟೆ. ಅದು ಸಿಗದಿದ್ರೆ ಕಿರಾಲ್‌ಬೋಗಿಯನ್ನೂ ಬಳಸಬಹುದು. ಆದ್ರೆ ತೇಗದಮರ ಸಿಗುವಾಗ ಕಿರಾಲ್‌ಬೋಗಿ ಯಾಕೆ ಬೇಕು ಅಂತ ನಾನು ಆ ಮರದ ಬಗ್ಗೆ ಹೇಳ್ತಾ ಇಲ್ಲ ಅಷ್ಟೆ'